Literacy for a Billion

Movie: Hennia Sedu
Year: 1981

Song: Sanje Hotnage Bandya Itlage
Lyricist: R.N.Jayagopal

ಸಂಜೆ ಹೊತಾಗೆ ಬಂದ್ಯಾ ಇತ್ಲಾಗೇ
ನಾನೊಬ್ಳೆ ಇಲ್ಲೀ ನಮ್ಮನೆ ಹಿತ್ಲಾಗೆ
ಅಕ್ಕ ಪಕ್ಕಾ ಎಲ್ಲಾ ನೊಡ್ತಾರಿತ್ಲಾಗೇ
ಬಾರೊ ನೀ ಒಳಗೇ ರಾತ್ರಿ ಕತ್ಲಾಗೇ
ಸಂಜೆ ಹೊತಾಗೆ ಬಂದೇ ಇತ್ಲಾಗೇ
ನೀನೊಬ್ಳೆ ನಿಂತೇ ನಿಮ್ಮನೆ ಹಿತ್ಲಾಗೆ
ಹೀಗ್ಯಾಕೆ ನೊಡ್ತೀ ಅತ್ಲಾಗಿತ್ಲಾಗೆ
ಮಂದಿ ಹೊಕ್ಹೊಳ್ಳೀ ಹೊಟ್ಟೇಕಿಚ್ಹಾಗೇ.....
ಗಲ್ಲೀ ಗಲ್ಲೀ ತಿರುಗಾಡಿ ಬರು ಬರು ನೀನು
ಒಂಟಿಯಾಗಿ ಮನೆಯಲ್ಲ ಇರುವಳು ನಾನು
ಊರಲ್ಲಿ ನನ್ಮಾನ ಮಣ್ಣಾಗೈತೇ
ಆಡೊರ ಬಾಯಲ್ಲಿ ಬಿದ್ಹೊಗೈತೇ
ನನ ಮರುವಾದೆ ಕಾಪಾಡೊ ಮಹರಾಯಾ
ನೀನು ರಾತ್ರೀಗೆ ಇಲ್ಲೀ ಬಾರೊ ಸುಖರಾಯಾ
ಹೇಯ್
ಸಂಜೆ ಹೊತಾಗೆ ಬಂದೇ ಇತ್ಲಾಗೇ
ನೀನೊಬ್ಳೆ ನಿಂತೀ ನಿಮ್ಮನೆ ಹಿತ್ಲಾಗೆ
ಪ್ರೀತಿಯಮಾಡೊಕೆ ಹೆದರಿಕೆ ಏಕೇ
ಅಕ್ಕ ಪಕ್ಕ ಇರುವೊರ ಅಪ್ಪನೇ ಬೇಕೇ

ಭ್ರಮರಕ್ಕೆ ಹೂವದು ನಾಚೊದಿಲ್ಲಾ
ಜೇನನು ನೀಡೊಕೆ ಅಂಜೋದಿಲ್ಲಾ
ತುಂಬಾ ಬಾಯಾರ್ಕೆ ಆಗುತಿದೆ ನನ ಚಿನಾ
ನಿನ್ನ ತುಟಿಜೇನ ನೀಡಿದ್ರೆ ಬಲುಚೆನಾ
ಸಂಜೆ ಹೊತಾಗೆ ಬಂದ್ಯಾ ಇತ್ಲಾಗೇ
ನಾನೊಬ್ಳೆ ಇಲ್ಲೀ ನಮ್ಮನೆ ಹಿತ್ಲಾಗೆ
ಬಾಯ್ತುಂಬ ತಾಂಬೂಲ ಮೆಲ್ಲುತ ನೀನು
ನಗುವಾಗ ಎದೆತಾಳ ತಪ್ಪುವುದೇನೂ
ಸಿಹಿಯಾಗಿ ಏನೇನೊ ಹೇಳಲು ನೀನು
ಮೈಯ್ಯೆಲ್ಲಾ ಬಿಸಿಯಾಗಿ ನಿಂತೆನು ನಾನು
ಬಾಯಲ್ಲಿ ನೀರೂರ್ಸೊ ಸಕ್ಕೇ ಗೊಂಬೇ
ನೂರಾಸೆ ತಂದಂಥ ದಾಳಿಂಬೇ
ನನ ಸೊಂಟವ ನೀ ಹೀಗೆ ಹಿಡಿಬೇಕೇ
ಸ್ವಲ್ಪ ನಾಜೂಕು ಮುರಿದೀತು ಬಲು ಜೋಕೇ
ಏಯ್
ಸಂಜೆ ಹೊತಾಗೆ ಬಂದೇ ಇತ್ಲಾಗೇ
ನೀನೊಬ್ಳೆ ನಿಂತೀ ನಿಮ್ಮನೆ ಹಿತ್ಲಾಗೆ
ಅಕ್ಕ ಪಕ್ಕಾ ಎಲ್ಲಾ ನೊಡ್ತಾರಿತ್ಲಾಗೇ
ಬಾರೊ ನೀ ಒಳಗೇ ರಾತ್ರಿ ಕತ್ಲಾಗೇ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.